ಸುದ್ದಿ ಸಿಂಚನ

ಮಾರಿಕಾಂಬ ಅಮ್ಮನವರಿಗೆ ಗಜಲಕ್ಷ್ಮಿ ದೇವಿ ಅಲಂಕಾರ

ಶಿವಮೊಗ್ಗ: ಶಿವಮೊಗ್ಗದ ಕೋಟೆ ಶ್ರೀ ಮಾರಿಕಾಂಬ ದೇವಸ್ಥಾನದಲ್ಲಿ ಶ್ರಾವಣ ಮಾಸದ ಎರಡನೇ ಶುಕ್ರವಾರ ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಕೋಟೆ ಶ್ರೀ ಮಾರಿಕಾಂಬ ಅಮ್ಮನವರಿಗೆ ವಿಶೇಷ ಗಜಲಕ್ಷ್ಮಿ ದೇವಿಯ ಅಲಂಕಾರ ಮಾಡಲಾಯಿತು.

ಜಿಲ್ಲೆಯ ಅರಣ್ಯ ಸಮಸ್ಯೆಗಳಿಗೆ ಪರಿಹಾರ ಒದಗಿಸಿ

ಅರಣ್ಯ ಸಚಿವ ರಾಮಲಿಂಗಾರೆಡ್ಡಿ ಭೇಟಿಯಾಗಿ ಸಂಸದ ಬಿ.ವೈ.ರಾಘವೇಂದ್ರ ಮನವಿ | ಸಚಿವರಿಂದ ಸಕಾರಾತ್ಮಕ ಸ್ಪಂದನೆ

- **ಕನ್ನಡಪ್ರಭ ವಾರ್ತೆ** ಶಿವಮೊಗ್ಗ

ಜಿಲ್ಲೆಯ ವ್ಯಾಪ್ತಿಯ ಅರಣ್ಯ ಭೂಮಿ, ವನ್ಯಜೀವಿಧಾಮಗಳ ಗಡಿ ಗುರುತಿಸುವಿಕೆ ಹಾಗೂ ಪ್ರಮುಖ ಯೋಜನೆಗಳಿಗೆ ಸಂಬಂಧಿಸಿದಂತೆ ಎದುರಾಗಿರುವ ಹಲವು ವರ್ಷಗಳ ತೊಡಕುಗಳನ್ನು ಶೀಘ್ರ ಇತ್ಯರ್ಥಪಡಿಸುವಂತೆ ಆಗ್ರಹಿಸಿ ಸಂಸದ ಬಿ.ವೈ.ರಾಘವೇಂದ್ರ ಬೆಂಗಳೂರಿನಲ್ಲಿ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವ ರಾಮಲಿಂಗಾರೆಡ್ಡಿ ಹಾಗೂ ಸರ್ಕಾರದ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಅವರನ್ನು ಭೇಟಿಯಾಗಿ ಸುದೀರ್ಘ ಚರ್ಚೆ ನಡೆಸಿದರು.

ಕ್ಷೇತ್ರದ ರೈತರು, ಶರಾವತಿ ಸಂತ್ರಸ್ತರು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಅರಣ್ಯ ಇಲಾಖೆಯಿಂದ ತಕ್ಷಣವೇ ಆಗಬೇಕಾದ ಪ್ರಮುಖ ವಿಷಯಗಳ ಕುರಿತು ಸಂಸದ ಬಿ.ವೈ.ರಾಘವೇಂದ್ರ ಅವರು ಸಚಿವರಿಗೆ ವಿಸ್ತೃತ ಮನವಿ ಸಲ್ಲಿಸಿ, ಇವುಗಳನ್ನು ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ತಕ್ಷಣವೇ ರವಾನಿಸಿ ಶೀಘ್ರ ವಿಲೇವಾರಿಗೆ ನಿರ್ದೇಶನ ನೀಡುವಂತೆ ಸಚಿವರನ್ನು ಒತ್ತಾಯಿಸಿದರು.

ಪ್ರಮುಖವಾಗಿ ಶೆಟ್ಟಿಹಳ್ಳಿ ವನ್ಯಜೀವಿಧಾಮದ 397.96 ಚ.ಕಿ.ಮೀ ವ್ಯಾಪ್ತಿಯ ಗಡಿ ಮರುವಿಂಗಡಣೆಯ ಅಂತಿಮ ಅಧಿಸೂಚನೆಯನ್ನು ರಾಜ್ಯ ಸರ್ಕಾರ ಹೊರಡಿಸಿ, ಬಫರ್‌ಜೋನ್ ಗಡಿ ತಿದ್ದುಪಡಿಗೆ ಸಂಬಂಧಿಸಿದಂತೆ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯಕ್ಕೆ ಶಿಫಾರಸು ಕಳುಹಿಸಬೇಕು ಎಂದು ಸಂಸದರು ಕೋರಿಕೆ ಸಲ್ಲಿಸಿದ್ದಾರೆ.

ಬೆಂಗಳೂರಿನಲ್ಲಿ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವ ರಾಮಲಿಂಗಾರೆಡ್ಡಿ ಅವರನ್ನು ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ ಭೇಟಿ ಮಾಡಿ ಅರಣ್ಯ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿದರು.

ಶರಾವತಿ ಸಿಂಹ-ಬಾಲದ ಮಕಾಕ್ (Sharavathi Lion&Tailed Macaque Sanctuary) ಅಭಯಾರಣ್ಯದ ಗಡಿಯನ್ನು ಅಂತಿಮಗೊಳಿಸುವ ಪ್ರಕ್ರಿಯೆಯನ್ನು ಶೀಘ್ರದಲ್ಲಿ ಮುಗಿಸುವಂತೆ ಸಂಸದರು ಮನವಿ ಮಾಡಿಕೊಂಡಿದ್ದಾರೆ.

ಇದರೊಂದಿಗೆ ದಶಕಗಳಿಂದ ಬಾಕಿಯಿರುವ ಶರಾವತಿ ಸಂತ್ರಸ್ತರ ಪುನರ್ವಸತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಶಿವಮೊಗ್ಗ ಜಿಲ್ಲಾಧಿಕಾರಿಗಳಿಗೆ ತಕ್ಷಣವೇ ಸ್ಥಳ ಪರಿಶೀಲನೆ ಪೂರ್ಣಗೊಳಿಸಿ ಪ್ರಸ್ತಾವನೆ ಸಲ್ಲಿಸಲು ಕಟ್ಟುನಿಟ್ಟಿನ ಸೂಚನೆ ನೀಡುವಂತೆ ಹಾಗೂ ಮೈಸೂರು ಪೇಪರ್‌ಮಿಲ್ಸ್ (MPM) ಅರಣ್ಯ ವ್ಯಾಪ್ತಿಯಲ್ಲಿ ಮರ ತೆರವುಗೊಳಿಸುವ ನಿರ್ವಹಣಾ ಯೋಜನೆಗೆ (Management Plan) ಆದ್ಯತೆಯ ಮೇರೆಗೆ ಅನುಮೋದನೆ ದೊರಕಿಸಿ ಕೊಡುವಂತೆ ಬಿ.ವೈ.ರಾಘವೇಂದ್ರ ಅವರು ಮಾನ್ಯ ಸಚಿವರನ್ನು ಕೋರಿದ್ದಾರೆ.

ಅಲ್ಲದೆ, ರಾಷ್ಟ್ರೀಯ ಹೆದ್ದಾರಿ 766ಸಿ (ಬೆಕ್ಕೋಡಿ ಯೋಜನೆ) ಅಡಿಯಲ್ಲಿ ಹೊಸನಗರದ ಮಾವಿನಕೊಪ್ಪ ವೃತ್ತದಿಂದ ಅಡುಗೋಡಿವರೆಗಿನ ರಸ್ತೆ ಮತ್ತು ಸೇತುವೆ ನಿರ್ಮಾಣ ಕಾಮಗಾರಿಯ ಎರಡನೇ ಹಂತದ ಅನುಮೋದನೆ ಪ್ರಸ್ತಾವನೆಯನ್ನು ತಕ್ಷಣವೇ ಸಲ್ಲಿಸಲು ಸಾಗರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ನಿರ್ದೇಶಿಸುವುದು.

- ಕೊಡಚಾದ್ರಿ ಬೆಟ್ಟದಿಂದ ಕೊಲ್ಲೂರಿಗೆ ಕೇಬಲ್ ಕಾರ್ ಯೋಜನೆ ಮಂಜೂರಾತಿ ಅನುಮೋದನೆಗೆ ಆಗ್ರಹ
- ಶರಾವತಿ ಸಂತ್ರಸ್ತರ ಪುನರ್ವಸತಿಗೆ ಸಂಬಂಧಪಟ್ಟಂತೆ ಚರ್ಚೆ
- ವನ್ಯಜೀವಿಧಾಮಗಳ ಗಡಿ ಗುರುತಿಸುವಿಕೆಗೆ ಮನವಿ

ಕೊಡಚಾದ್ರಿ ಬೆಟ್ಟದಿಂದ ಕೊಲ್ಲೂರಿಗೆ ಪ್ರವಾಸಿಗರ ಸುಲಭ ಸಂಚಾರಕ್ಕಾಗಿ ನಿರ್ಮಿಸಲು ಉದ್ದೇಶಿಸಿರುವ ಕೇಬಲ್ ಕಾರ್‌ಯೋಜನೆಗೆ ಪರಿಸರ ಮತ್ತು ವನ್ಯಜೀವಿ ಮಂಜೂರಾತಿಯ ಶಿಫಾರಸು ಪತ್ರ ಬಾಕಿಯಿದ್ದು, ಹಂತ-1ರ ಅನುಮೋದನೆಗೆ ಶೀಘ್ರ ಕ್ರಮ ಕೈಗೊಳ್ಳುವಂತೆ ಸಂಸದರು ಆಗ್ರಹಿಸಿದರು.

ಸಂಸದರ ಪ್ರತಿಯೊಂದು ಮನವಿಯನ್ನು ಅತ್ಯಂತ ಸಾವಧಾನದಿಂದ ಆಲಿಸಿದ ಸಚಿವ ರಾಮಲಿಂಗಾರೆಡ್ಡಿ ಅವರು ಸಂಸದರ ಕೋರಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿ, ಸಂಸದರು ಪ್ರಸ್ತಾಪಿಸಿದ ಎಲ್ಲಾ ವಿಷಯಗಳ ಕುರಿತು ಸೂಕ್ತ ಪರಿಶೀಲನೆ ನಡೆಸಿ ಶೀಘ್ರದಲ್ಲೇ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಅಧಿಕ ದರ ನೀಡಿ ಜಾಗ ಖರೀದಿ ಆರೋಪ ಸುಳ್ಳು

ಮಾಮ್ ಕೋಸ್ ಮೇಲಿನ ಆರೋಪಕ್ಕೆ ಉಪಾಧ್ಯಕ್ಷ ಮಹೇಶ್ ಸ್ಪಷ್ಟನೆ | ವಾರ್ಷಿಕ ಮಹಾಸಭೆಗೆ ಆಹ್ವಾನ

- **ಕನ್ನಡಪ್ರಭ ವಾರ್ತೆ** ಶಿವಮೊಗ್ಗ

ಹೆಚ್ಚಿನ ದರ ನೀಡಿ ನಿವೇಶನ ಖರೀದಿ ಮಾಡಲಾಗಿದೆ ಎಂದು ಮಾಮ್ ಕೋಸ್ ಸಂಸ್ಥೆಯ ಮೇಲೆ ಮಾಡಿರುವ ಆರೋಪ ಸತ್ಯಕ್ಕೆ ದೂರವಾಗಿದೆ ಎಂದು ಮಾಮ್‌ಕೋಸ್ ಉಪಾಧ್ಯಕ್ಷ ಮಹೇಶ್ ಎಚ್.ಎಸ್.ಹುಲ್ಕುಳಿ ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಪ್ರಸ್ತುತ ತೀರ್ಥಹಳ್ಳಿಯ ಮಾಮ್ ಕೋಸ್ ಶಾಖೆಗೆ ಪ್ರತಿ ವರ್ಷ 45000 ರಿಂದ 50000 ಅಡಕೆ ಮೂಟೆ ಅವಕವಾಗುತ್ತಿದ್ದು, ಸರಾಸರಿ 30000 ಮೂಟೆ ಅಡಕೆ ದಾಸ್ತಾನು ಇರುತದೆ. ಎ.ಪಿ.ಎಂ.ಸಿ. ಆವರಣದಲ್ಲಿರುವ ಸಂಘದ ಸ್ವಂತ ಗೋದಾಮಿನಲ್ಲಿ 8000 ಮೂಟೆ ಮಾತ್ರ ದಾಸ್ತಾನು ಸಾಮರ್ಥ್ಯ ಹೊಂದಿದ್ದು, ಉಳಿದಂತೆ ಅವಶ್ಯವಿರುವ ಗೋದಾಮನ್ನು ಎ.ಪಿ.ಎಂ.ಸಿಯಿಂದ ಬಾಡಿಗೆಗೆ ಪಡೆಯಲಾಗುತ್ತಿದೆ. ಇದಕ್ಕಾಗಿ ವಾರ್ಷಿಕ 40 ರಿಂದ 45 ಲಕ್ಷ ರು. ಬಾಡಿಗೆ ಪಾವತಿಸಲಾಗುತ್ತಿದೆ. ಸುಗ್ಗಿಯ ಕಾಲದಲ್ಲಿ ಕೆಲವೊಮ್ಮೆ ಅಡಕೆ ಮೂಟೆ ದಾಸ್ತಾನಿಡಲೂ ಸಹ ಸಮಸ್ಯೆ ಆಗುತ್ತಿದ್ದು, ಇದರಿಂದಾಗಿ ರೈತರು ಮಾರುಕಟ್ಟೆಗೆ ತಂದ ತಮ್ಮ ಮೂಟೆಯನ್ನು ವಾಪಸು ತೆಗೆದುಕೊಂಡು ಹೋಗಿರುವ ಸಂದರ್ಭಗಳು ಇವೆ.

ಈ ಹಿನ್ನಲೆಯಲ್ಲಿ ಸಂಘವು ತನ್ನದೇ ಸ್ವಂತ ಗೋದಾಮನ್ನು ಹೊಂದುವ ಉದ್ದೇಶದಿಂದ ಕಳೆದ 10 ವರ್ಷದಿಂದ ಜಾಗ ಖರೀದಿಸಲು ನೋಡುತ್ತಿದ್ದು, ಸೂಕ್ತವಾದ ಜಾಗ ದೊರೆಯದ ಕಾರಣ ಮಾಮ್‌ಕೋಸ್‌ನ ಕಳೆದ ಸಾಲಿನ ವಾರ್ಷಿಕ ಮಹಾಸಭೆಯ ತೀರ್ಮಾನದಂತೆ ನಿವೇಶನ ಖರೀದಿಗಾಗಿ ಪತ್ರಿಕಾ ಪ್ರಕಟಣೆ ನೀಡಲಾಗಿತ್ತು.

ಕಳೆದ ಒಂದು ವರ್ಷದಿಂದಲೂ ಈ ನಿವೇಶನ ಖರೀದಿ ದರದ ಬಗ್ಗೆ ಚರ್ಚೆಯಾಗುತ್ತಿದ್ದು, ಅಂತಿಮವಾಗಿ ಸನ್ನಿವಾಸ ವೆಂಚರ್ಸ್ ತೀರ್ಥಹಳ್ಳಿ ಇವರು ತಮ್ಮ ನಿವೇಶನ ಮಾರಾಟ ಮಾಡಲು ಮುಂದೆ ಬಂದಿದ್ದು, ಸಂಘದ ವ್ಯವಹಾರಕ್ಕೆ ಈ ಜಾಗವು ಸಮರ್ಪಕವಾಗಿ ಕಂಡು ಬಂದಿದ್ದರಿಂದ ಚದರ ಅಡಿ ಒಂದಕ್ಕೆ 1,125 ರು. ರಂತೆ ಜಾಗ ಮಾರಾಟ ಮಾಡಲು ಒಪ್ಪಿಕೊಂಡು 62617.5 ಚದರ ಅಡಿ ಅಳತೆಯ ಈ ನಿವೇಶನ ಖರೀದಿಸಲಾಗಿದೆ.

ಇದಕ್ಕೆ ಕರ್ನಾಟಕ ಸ್ಟ್ಯಾಂಪ್ ಡ್ಯೂಟಿ ಕಾಯ್ದೆ 1957ರ ಅನ್ವಯ ಸ್ಟ್ಯಾಂಪ್ ಡ್ಯೂಟಿ 53,90,103 ರು. ಪಾವತಿಸಲಾಗಿದೆ. ಸಾಮಾನ್ಯವಾಗಿ ವೈಯಕ್ತಿಕವಾಗಿ ನಿವೇಶನ ಖರೀದಿ ಮಾಡುವವರು ಮಾರ್ಗಸೂಚಿ ದರಕ್ಕೆ (ಎಸ್.ಆರ್.ರೇಟ್) ಅನುಗುಣವಾಗಿ ಖರೀದಿಸಿ ನೋಂದಣಿ ಮಾಡಿಸಿಕೊಳ್ಳುತ್ತಾರೆ. ಆದರೆ, ಮಾಮ್‌ಕೋಸ್ ಸಂಸ್ಥೆಯವರು ಮಾರುಕಟ್ಟೆ ದರವನ್ನೇ (ಮಾರ್ಕೆಟ್ ವ್ಯಾಲ್ಯೂ) ಆಧರಿಸಿ ಖರೀದಿ ಮಾಡಿ ಕಾಯ್ದೆ ಅನ್ವಯ ಸ್ಟ್ಯಾಂಪ್ ಡ್ಯೂಟಿ ಪಾವತಿಸಿ ನೋಂದಣಿ ಮಾಡಿಕೊಳ್ಳಬೇಕಾಗಿರುತ್ತದೆ. ಅದರಂತೆ ಖರೀದಿ ದರ ಹೆಚ್ಚಿಗೆಯಾಗಿ ಕಂಡು ಬಂದಿದೆ.

ಈ ನಿವೇಶನದ ಆಸುಪಾಸಿನಲ್ಲಿರುವ ಜಾಗವು ಚದರ ಅಡಿ ಒಂದಕ್ಕೆ ಅಂದಾಜು 1,500 ದರ ಇರುವುದು ಸಹ ತಿಳಿದು ಬಂದಿರುತ್ತದೆ. ಸಂಘವು ಖರೀದಿಸಿದ ಈ ನಿವೇಶನವು ವ್ಯವಸಾಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆ (Commercial Conversion) ಆಗಿದ್ದು, ಸ್ವಾಭಾವಿಕವಾಗಿ ಇದರ ದರ ಹೆಚ್ಚಿಗೆ ಇರುತ್ತದೆ.

ಈ ಹಿಂದೆ ಸಂಘದ ಆಡಳಿತ ಮಂಡಳಿ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತ ಕೆಲವರು ಸಂಘದ ಸದಸ್ಯರಲ್ಲಿ ಗೊಂದಲ ಮೂಡಿಸಿ ದುರುದ್ದೇಶದಿಂದ ಸಂಘವು ಈ ಜಾಗವನ್ನು ಹೆಚ್ಚಿನ ಧಾರಣೆಗೆ ಖರೀದಿ ಮಾಡಿದೆ ಎಂದು ವಿನಾಕಾರಣ ಆರೋಪ ಮಾಡುತ್ತಿದ್ದಾರೆ. ಸಂಘವು ಉತ್ತಮ ಆರ್ಥಿಕ ಸ್ಥಿತಿ ಹೊಂದಿದ್ದು, ಪಾರದರ್ಶಕತೆಯಿಂದ ಕಾರ್ಯನಿರ್ವಹಿಸುತ್ತಿರುವುದನ್ನು ಸಹಿಸದೆ ಸಂಸ್ಥೆಯ ಹೆಸರಿಗೆ ಮಸಿ ಬಳಿಯುವ ಪ್ರಯತ್ನ ಮಾಡುತ್ತಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

ಸಂಘದ ಮೇಲೆ ವಿನಾಕಾರಣ ಆರೋಪ ಮಾಡುತ್ತಿರುವವರು ತೀರ್ಥಹಳ್ಳಿಯ ಹೃದಯ ಭಾಗದಲ್ಲಿ ಇದೇ ತರಹದ ನಿವೇಶನವನ್ನು ಕಡಿಮೆ ಮೊತ್ತಕ್ಕೆ ಕೊಡಿಸಲು ಸಾಧ್ಯವೇ ಎಂಬುದನ್ನು ಪರಾಮರ್ಶಿಸಲಿ. ಸಂಘವು ಅಡಕೆ ಬೆಳೆಗಾರರ ಹಿತರಕ್ಷಣೆಗಾಗಿಯೇ ಶ್ರಮಿಸುತ್ತಿದ್ದು, ರೈತರ ಹಣವನ್ನು ಯಾವತ್ತೂ ದುರುಪಯೋಗ ಮಾಡುವ ಚಿಂತನೆ ಮಾಡಿರುವುದಿಲ್ಲ ಎಂದು ಸ್ಪಷ್ಟಪಡಿಸಿರುವ ಅವರು, ಸದಸ್ಯರಿಗೆ ಹೆಚ್ಚಿನ ಮಾಹಿತಿ ಅಥವಾ ಸ್ಪಷ್ಟೀಕರಣ ಬೇಕಾಗಿದ್ದಲ್ಲಿ ಆ.30ರಂದು ಶಿವಮೊಗ್ಗದ ಪೆಸಿಟ್ ಕಾಲೇಜ್‌ನ ಸಭಾಂಗಣದಲ್ಲಿ ನಡೆಯಲಿರುವ ಸಂಘದ ವಾರ್ಷಿಕ ಮಹಾಸಭೆಗೆ ಆಗಮಿಸಿ ಸ್ಪಷ್ಟೀಕರಣ ಪಡೆಯಬಹುದು ಎಂದು ತಿಳಿಸಿದ್ದಾರೆ.

ಬಾಕಿ ಇರುವ ಪಿಂಚಣಿ ಹಣ ಬಿಡುಗಡೆಗೊಳಿಸಿ: ಕಲ್ಲೂರು ಮೇಘರಾಜ್

- **ಕನ್ನಡಪ್ರಭ ವಾರ್ತೆ** ಶಿವಮೊಗ್ಗ

ಸಾಮಾಜಿಕ ಭದ್ರತಾ ಯೋಜನೆಯಡಿಯಲ್ಲಿ ಪಿಂಚಣಿ ಪಡೆಯುತ್ತಿದ್ದ ಬಾಕಿ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಶಾಂತವೇರಿ ಗೋಪಾಲಗೌಡ ಸಮಾಜವಾದಿ ಅಧ್ಯಯನ ಕೇಂದ್ರ ಟ್ರಸ್ಟ್‌ನ ಟ್ರಸ್ಟಿ ಕಲ್ಲೂರು ಮೇಘರಾಜ್ ಆಗ್ರಹಿಸಿದರು. ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಳೆದ 5 ತಿಂಗಳಿನಿಂದ ತಡೆಹಿಡಿಯಲಾಗಿರುವ 18.06 ಲಕ್ಷ ಮಂದಿಯ ಸಾಮಾಜಿಕ ಭದ್ರತಾ ಪಿಂಚಣಿಯನ್ನು ಕೂಡಲೇ ಬಿಡುಗಡೆ ಮಾಡಬೇಕೆಂದರು. ಕರ್ನಾಟಕ ಸರ್ಕಾರವು ಸಂಧ್ಯಾ ಸುರಕ್ಷಾ, ನಿರ್ಗತಿಕ ವಿಧವಾ ವೇತನ, ಅಂಗವಿಕಲರ ವೇತನ ಸೇರಿದಂತೆ ಸಾಮಾಜಿಕ ಭದ್ರತಾ ಯೋಜನೆಗಳ ವಾರ್ಷಿಕ ವರಮಾನ ಮಿತಿಯನ್ನು ಈ ಹಿಂದೆ ಇದ್ದ ಆದಾಯ ಮಿತಿಯನ್ನು 32,000 ರು.ನಿಂದ 1,20,000 ರು.ಗಳಿಗೆ ಏರಿಸಿರುವುದನ್ನು ನಮ್ಮ ಟ್ರಸ್ಟ್ ಸ್ವಾಗತಿಸುತ್ತದೆ. ಈ ಮಾನವೀಯ ನಿರ್ಧಾರ ಕೈಗೊಂಡ ಕಂದಾಯ ಸಚಿವರೂ ಆದ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ ಅವರಿಗೆ ಅಭಿನಂದನೆ ಸಲ್ಲಿಸಿದ ಅವರು, 4-5 ತಿಂಗಳಿಂದ ಪಿಂಚಣಿ ನೀಡಿಲ್ಲ. ಇದನ್ನು ನೀಡಲೇಬೇಕು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕಲ್ಲೂರು ಮೇಘರಾಜ್ ಮಾತನಾಡಿದರು.

ಸರ್ಕಾರ ತಡೆ ಹಿಡಿದಿರುವ ಫಲಾನುಭವಿಗಳ ಬಾಕಿ ಹಣ ಕೂಡಲೇ ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ಬೃಹತ್ ಹೋರಾಟ ನಡೆಸಲಾಗುವುದು ಎಂದು ಆಗ್ರಹಿಸಿದರು.

ಗೋಷ್ಠಿಯಲ್ಲಿ ಪ್ರಮುಖರಾದ ಎಚ್.ಎಂ. ಸಂಗಯ್ಯ, ಆಲಿಂಖಾನ್, ನಂಜುಂಡಪ್ಪ, ಎಸ್.ಪಿ. ಶಿವಣ್ಣ, ಕೊಡ್ಲು ಶ್ರೀಧರ್, ಸಂಧ್ಯಾ, ಶಂಕ್ರಾನಾಯ್ಕ್, ಮುಖೇಶ್ ಇದ್ದರು.

CHANGE OF NAME

I, **SAJID AHMED SAJJAD KHATIB, S/o SAJJAD AHMED KHATIB,** residing at #93, Sajjad Mansion, Al-Hareem Layout, Gopala Extension, Shivamogga – 577205, hereby declare that my earlier name was **SAJID AHMED KHATIB S/O SAJJAD AHMED KHATIB.** I have changed my name to **SAJID AHMED SAJJAD KHATIB** vide affidavit dated 19-08-2026, sworn before Notary **Bhavani Rao S.** Henceforth, I shall be known and identified as **SAJID AHMED SAJJAD KHATIB** for all official, legal and personal purposes.

ಹೆಸರು ಬದಲಾವಣೆ

ನಾನು, **ವಿಮಲಾಕ್ಷಿ ಕೋಂ ಕಿಡಿಯಪ್ಪ, ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕು ಕಸಬಾ ಹೋಬಳಿ, ಕೊಡಕಣಿ ಗ್ರಾಮದ ವಾಸಿಯಾಗಿದ್ದು,** ನನ್ನ ಆಧಾರ್‌ಕಾರ್ಡ್, ರೇಷನ್‌ಕಾರ್ಡ್, ಗುರುತಿನ ಚೀಟಿ ಹಾಗೂ ಇತರೆ ದಾಖಲೆಗಳಲ್ಲಿ ನನ್ನ ಹೆಸರು **ವಿಮಲಾಕ್ಷಿ ಕೋಂ ಕಿಡಿಯಪ್ಪ** ಎಂದು ನಮೂದಾಗಿದ್ದು, RURAL POSTAL, LIFE INSURANCE POLICE NO R-KT-EA-792456 ರಲ್ಲಿ ನನ್ನ ಹೆಸರು **ಎಸ್. ಹಾಲೇಶ್ವರಿ** ಎಂದು ನಮೂದಾಗಿರುತ್ತದೆ. ಮೇಲೆ ತಿಳಿಸಿದ **ವಿಮಲಾಕ್ಷಿ ಹಾಗೂ ಎಸ್.ಹಾಲೇಶ್ವರಿ** ಈ ಎರಡು ಹೆಸರಿನ ವ್ಯಕ್ತಿ ಮತ್ತು ಹೆಸರು ನನ್ನದೇ ಆಗಿರುತ್ತದೆ ಎಂದು ದಿನಾಂಕ: 20-08-2026ರಂದು ನೋಟರಿ ಡಾಕಪ್ಪ, ಸೊರಬ ಅವರ ಮುಂದೆ ಪ್ರಮಾಣೀಕರಿಸಿದ್ದೇನೆ.

ಪ್ರಮಾಣೀಕರಿಸುವವರು
ಸಹಿ/- **ವಿಮಲಾಕ್ಷಿ ಹಾಗೂ ಎಸ್.ಹಾಲೇಶ್ವರಿ**

ಹೋಮಿ ಬಾಬಾ ವಿಜ್ಞಾನ ಶಿಕ್ಷಣ ಸಂಸ್ಥೆ

ಟಾಟಾ ಮೂಲಭೂತ ಸಂಶೋಧನಾ ಸಂಸ್ಥೆ
ರಾಷ್ಟ್ರೀಯ ಒಲಂಪಿಯಾಡ್ ಕಾರ್ಯಕ್ರಮ 2026-2027
ಖಗೋಳಶಾಸ್ತ್ರ, ಜೀವ ಶಾಸ್ತ್ರ, ರಸಾಯನ ಶಾಸ್ತ್ರ, ಭೌತ ಶಾಸ್ತ್ರ, ಕಿರಿಯ ವಿಜ್ಞಾನ ಕಾರ್ಯಕ್ರಮದಲ್ಲಿ

ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಯಸುವ ಎಲ್ಲಾ ವಿದ್ಯಾರ್ಥಿಗಳು **ನವೆಂಬರ್ 21 ಮತ್ತು 22, 2026ರಂದು ಭಾರತೀಯ ಭೌತಶಾಸ್ತ್ರ ಶಿಕ್ಷಕರ ಸಂಘ** (IAPT)ನಡೆಸುವ ಸಂಬಂಧಿಸಿದಂತೆ **ರಾಷ್ಟ್ರೀಯ ಪ್ರಾಮಾಣಿಕ ಪರೀಕ್ಷೆಗಳಿಗೆ** (NSEs) (ವಿಜ್ಞಾನ ವಿಷಯಕ್ಕಾಗಿ) ಹಾಜರಾಗಬೇಕು.

2027ರಲ್ಲಿ ನಡೆಯುವ ಸಂಬಂಧಿತ ಅಂತರಾಷ್ಟ್ರೀಯ ಒಲಂಪಿಯಾಡ್‌ಗಳಲ್ಲಿ ಭಾಗವಹಿಸುವತ್ತ NSE ನಲ್ಲಿ ಅರ್ಹತೆ ಪಡೆಯುವುದು ಮೊದಲ ಹೆಜ್ಜೆಯಾಗಿದೆ.

ನೋಂದಾಯಿಸಲು:
NSEs: https://www.iapt.org.in (Aug 21-Sep 14, 2026)
ಇಲ್ಲಿಗೆ ಭೇಟಿ ನೀಡಿ.
ಹೆಚ್ಚಿನ ವಿವರಗಳಿಗಾಗಿ: https://olympiads.hbcse.tifr.res.in
https://www.iapt.org.in

CBC48143/11/0005/2627

ಶಿವಮೊಗ್ಗದ ಮಾನ್ಯ ಪ್ರಿನ್ಸಿಪಾಲ್ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಶಿವಮೊಗ್ಗ ಇವರ ನ್ಯಾಯಾಲಯದಲ್ಲಿ
ಪಿ & ಎಸ್.ಸಿ. 41/25

ಅರ್ಜಿದಾರರು :- ಗುಡ್ಡಪ್ಪ ಬಿನ್ ನೀಲಪ ಯಾನೆ ನೀಲಪ್ಪ ಅಡಿವೇರ ವಯಸ್ಸು ಸುಮಾರು 40 ವರ್ಷಗಳು ವಾಸ-ಶಿವಾಜಿ ಕಣಿಯ ಗ್ರಾಮ ಶಿಕಾರಿಪುರ (ತಾ) ಶಿವಮೊಗ್ಗ(ಜಿ),

ವಿರುದ್ಧ

ಎದುರುದಾರರು :-1, ಚೌಡಮ್ಮ ಕೋಂ ಮಂಜಪ್ಪ ವಯಸ್ಸು 48 ವರ್ಷಗಳು 2. ಶೃತಿ ಕೋಂ ಶಿವಪ್ಪ ವಯಸ್ಸು 30 ವರ್ಷಗಳು 3. ಮಮತ ಕೋಂ ಮಾಲತೇಶ ವಯಸ್ಸು 28 ವರ್ಷಗಳು 4. ಗುರುರಾಜ ಬಿನ್ ಮಂಜಪ್ಪ ವಯಸ್ಸು 23 ವರ್ಷಗಳು 1 ರಿಂದ 4ನೇ ಎದುರುದಾರರ ವಾಸ ಶಿವಾಜಿ ಕಣಿಯ ಗ್ರಾಮ ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

ಸಾರ್ವಜನಿಕ ಪ್ರಕಟಣೆ

ಈ ಮೂಲಕ ತಿಳಿಯ ಪಡಿಸುವುದೇನೆಂದರೆ, ಅರ್ಜಿದಾರರ ತಂದೆಯ ಅಣ್ಣನ ಹೆಂಡತಿಯಾದ ಲಕ್ಷ್ಮಮ್ಮ ಕೋಂ ಕರಿಬಸಪ್ಪ ಅಡಿವೇರ ಇವರಿಗೆ ಶಿಕಾರಿಪುರ ತಾಲ್ಲೂಕು, ಕಸಬಾ ಹೋಬಳಿ, ಕಣಿಯ ಗ್ರಾಮದ ಸರ್ವೆ ನಂಬರ್ 58 ರಲ್ಲಿ 01-ಎಕರೆ 20-ಗುಂಟೆ ಜಮೀನು ಎಮ್.ಆರ್.ನಂ.23/2011 ರ ಪ್ರಕಾರ ಲಕ್ಷ್ಮಮ್ಮ ಕೋಂ ಕರಿಬಸಪ್ಪ ಅಡಿವೇರ ಇವರ ಹೆಸರಿಗೆ ಖಾತೆ ಮತ್ತು ಪಹಣಿ ದಾಖಲಾಗಿ ಸ್ವಂತ ಸ್ವಾಧೀನಾನುಭವದಲ್ಲಿರುವ ಸ್ವತ್ತಾಗಿರುತ್ತದೆ. ತದ ನಂತರ ಶ್ರೀಮತಿ ಲಕ್ಷ್ಮಮ್ಮ ಕೋಂ ಕರಿಬಸಪ್ಪ ಅಡಿವೇರ ಇವರು ಈ ಕೆಳಕಂಡ ಶೆಡ್ಯೂಲ್ ಸ್ವತ್ತನ್ನು ಶಿಕಾರಿಪುರ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರವರ ಕಛೇರಿಯಲ್ಲಿ ಒಂದು ನೋಂದಾಯಿತ ವಿಲ್ ಯಾನೆ ಮರಣ ಶಾಸನವನ್ನು ದಿನಾಂಕ 06.03.2023 ರಂದು ಅರ್ಜಿದಾರರ ಹೆಸರಿಗೆ ಮಾಡಿರುತ್ತಾರೆ. ತದನಂತರ ಲಕ್ಷ್ಮಮ್ಮ ಕೋಂ ಕರಿಬಸಪ್ಪ ಅಡಿವೇರ ಇವರು ದಿನಾಂಕ 07-04-2025 ರಂದು ಮರಣ ಹೊಂದಿರುತ್ತಾರೆ. ಸದರಿ ವಿಲ್ ಯಾನೆ ಮರಣ ಶಾಸನದ ಪ್ರಕಾರ ಖಾತೆ ಮತ್ತು ಪಹಣಿ ದಾಖಲಾಗಬೇಕಾಗಿದ್ದು, ಈ ಸಂಬಂಧ ಶಿಕಾರಿಪುರ ತಾಲ್ಲೂಕು ತಹಶೀಲ್ದಾರ್‌ರವರು ಅರ್ಜಿದಾರರಿಗೆ ಪ್ರೊಬೇಟ್(Probate) ತರಲು ಮೌಖಿಕವಾಗಿ ಸಲಹೆ ನೀಡಿದ್ದರಿಂದ ಅರ್ಜಿದಾರರು ಈ ಅರ್ಜಿಯನ್ನು ಮಾನ್ಯ ನ್ಯಾಯಾಲಯದಲ್ಲಿ ದಾಖಲು ಮಾಡಿರುತ್ತಾರೆ. ಆದ್ದರಿಂದ ಈ ಮೇಲ್ಕಂಡವರು/ಬೇರೆ ಯಾರಾದರೂ ಆಸಕ್ತರಾದ ಯಾವುದೇ ವ್ಯಕ್ತಿಗಳು ಸದರಿ ಅರ್ಜಿಯಲ್ಲಿ ಹಾಜರಾಗಲು ಇಷ್ಟಪಟ್ಟಲ್ಲಿ ದಿನಾಂಕ 11.9.26ರಂದು ಬೆಳಗ್ಗೆ 11-00 ಗಂಟೆಗೆ ಖುದ್ದಾಗಿಯಾಗಲೀ ಅಥವಾ ತಮ್ಮ ನಿಯೋಜಿತ ವಕೀಲರ ಮೂಲಕವಾಗಲಿ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ -ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಮಾನ್ಯ ನ್ಯಾಯಾಲಯ ಏಕತರ್ಫಿಯಾಗಿ ತೀರ್ಮಾನಿಸುವುದು ತಿಳಿಯಿರಿ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಸಹಿ/- ಶಿರಸ್ತೇದಾರರು
ಪ್ರಿನ್ಸಿಪಲ್ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಶಿವಮೊಗ್ಗ.

ಸಹಿ/- ಹನುಮಂತಪ್ಪ ಬಿ
ಅರ್ಜಿದಾರರಪರ ವಕೀಲರು
ದಿನಾಂಕ: 13-08-2026

ಕನ್ನಡಪ್ರಭ
ಪ್ರತಿ ಭಾನುವಾರ
ಪ್ರಚಲಿತ ವಿದ್ಯಮಾನ, ಸಾಹಿತ್ಯ, ಚಿಣ್ಣರಾಟ, ಪ್ರವಾಸ, ಆಹಾರ ವಿಷಯಗಳ ಸಮೃದ್ಧ ಮಾಹಿತಿ
ART | LITERATURE | CULTURE | FOOD | TRAVEL
ಭಾನುಪ್ರಭ

ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್

ನೋಂದಾಯಿತ ಕಛೇರಿ :- ರಾಧಿಕಾ, 2ನೇ ಮಹಡಿ, ಲಾ ಗಾರ್ಡನ್ ರಸ್ತೆ, ನವರಂಗಪುರ, ಅಹಮದಾಬಾದ್-09.
ಶಾಖಾ ಕಚೇರಿ: ನಂ. 195/38, 1ನೇ ಮಹಡಿ, ಹೆಚ್‌ಡಿಎಫ್‌ಸಿ ಕಟ್ಟಡ, 10ನೇ ಅಡ್ಡ ರಸ್ತೆ, ವಿಲ್ಸನ್ ಗಾರ್ಡನ್ ಬೆಂಗಳೂರು-27.
ವೆಬ್ : www.hdbfs.com, Email ID: compliance@hdfs.com

ಇ-ಹರಾಜು ಮಾರಾಟ ಸೂಚನೆ

(ಸಾಲಗಾರ / ಸಹ-ಅರ್ಜಿದಾರ / ಸಾರ್ವಜನಿಕರಿಗೆ) (ಸರ್ಫೇಸಿ ಕಾಯ್ದೆ, 2002 ರ ನಿಯಮ 8(6) ರ ಅಡಿಯಲ್ಲಿ ಮತ್ತು ನಿಯಮ 9(1) ರ ಅಡಿಯಲ್ಲಿ)

ಕೆಳಗೆ ಸಹಿ ಮಾಡಲಾದ **ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್**ನ ಅಧಿಕೃತ ಅಧಿಕಾರಿ, ಕೆಳಗೆ ತಿಳಿಸಲಾದ ಸಾಲ ಖಾತೆಗಾಗಿ, ಸೆಕ್ಯುರಿಟೈಸೇಶನ್ ಮತ್ತು ಹಣಕಾಸು ಆಸ್ತಿಗಳ ಪುನರ್ನಿರ್ಮಾಣ ಮತ್ತು ಭದ್ರತಾ ಬಡ್ಡಿ ಜಾರಿ ಕಾಯ್ದೆ 2002 ರ ಅಡಿಯಲ್ಲಿ ಈ ಕೆಳಗಿನ ಆಸ್ತಿಯ ಸ್ವಾಧೀನವನ್ನು ವಹಿಸಿಕೊಂಡಿದ್ದಾರೆ ಮತ್ತು ಅದನ್ನು **"ಎಲ್ಲಿ ಇದೆಯೋ ಹಾಗೆಯೇ & ಎಲ್ಲಿ ಏನಿದೆಯೋ ಹಾಗೆಯೇ"** ಎಂಬ ಆಧಾರದ ಮೇಲೆ ಮಾರಾಟ ಮಾಡುವ ಹಕ್ಕನ್ನು ಹೊಂದಿದ್ದಾರೆ.

ಅರ್ಜಿದಾರರ ಮತ್ತು ಸಹ-ಅರ್ಜಿದಾರರ ಹೆಸರು ಮತ್ತು ವಿಳಾಸ:- 1. ಸೋನಾ ಎಂಟರ್‌ಪ್ರೈಸಸ್, ನಂ. 120 ಸಾಮಿಲ್ ರಸ್ತೆ, ಸಾಮಿಲ್ ರಸ್ತೆ, ಮಿಲ್ಲಾಘಟ್ಟ, ಶಿವಮೊಗ್ಗ, ಶಿವಮೊಗ್ಗ - 577205 ಕರ್ನಾಟಕ, **ಮತ್ತು ಅಲ್ಲದೇ : ರುಬಿನಾ ಇಲಿಯಾಸ್,** ಮೊಹಮದ್ ಇಲಿಯಾಸ್ ಅಹಮದ್ ರವರ ಪತ್ನಿ, ವಾರ್ಡ್ 27, ಖಾತೆ ನಂ. 819/21670/2, ಮಿಲ್ಲಾಘಟ್ಟ ಎಕ್ಸ್‌ಟೆನ್ಷನ್, ಶಿವಮೊಗ್ಗ-577201, **2. ರುಬೀನಾ ಕೌಸರ್,** ನಂ. 120 ಸಾಮಿಲ್ ರಸ್ತೆ, ಸಾಮಿಲ್ ರಸ್ತೆ, ಮಿಲ್ಲಾಘಟ್ಟ, ಶಿವಮೊಗ್ಗ, ಶಿವಮೊಗ್ಗ - 577205 ಕರ್ನಾಟಕ, **3. ಮೊಹಮದ್ ಇಲಿಯಾಸ್ ಅಹಮದ್,** ನಂ. 120 ಸಾಮಿಲ್ ರಸ್ತೆ, ಸಾಮಿಲ್ ರಸ್ತೆ, ಮಿಲ್ಲಾಘಟ್ಟ, ಶಿವಮೊಗ್ಗ, ಶಿವಮೊಗ್ಗ - 577205 ಕರ್ನಾಟಕ. **ಸಾಲದ ಖಾತೆ ನಂ. 24846408 & 42396087 ಅನ್ನು ಯೂನಿಕ್ ಐಡಿ 61648832 ಮೂಲಕ ಲಿಂಕ್ ಮಾಡಲಾಗಿದೆ,,. ಒಟ್ಟಾರೆ ಬಾಕಿ ಮೊತ್ತ : ರೂ. 73,89,980.26/-** (ಎಪ್ಪತ್ತೂರು ಲಕ್ಷದ ಎಂಭತ್ತೊಂಭತ್ತು ಸಾವಿರದ ಒಂಭೈನೂರಾ ಎಂಭತ್ತು ರೂ ಮತ್ತು ಇಪ್ಪತ್ತಾರು ಪೈ ಮಾತ್ರ) **19.08.2026** ರಂದು ಇದ್ದಂತೆ, ಹೆಚ್ಚಿನ ಬಡ್ಡಿ/ ಆಕಸ್ಮಿಕ ವೆಚ್ಚಗಳು/ ವೆಚ್ಚಗಳೊಂದಿಗೆ ಪೂರ್ಣ ಪಾವತಿಯ ದಿನಾಂಕದವರೆಗೆ. ಸುರಕ್ಷಿತ ಸಾಲಗಾರರಿಗೆ ತಿಳಿದಿರುವ ಯಾವುದಾದರೂ ಋಣಭಾರಗಳ ವಿವರಗಳು: - ನಿಲ್

ಸ್ಥಿರಾಸ್ತಿಗಳ ವಿವರಣೆ: ಸಕಲ ಸಮಸ್ತವೂ ಸೇರಿದಂತೆ ಆಸ್ತಿ ಶಿವಮೊಗ್ಗ ಸಿಟಿ ಕಾರ್ಪೋರೇಷನ್ ವ್ಯಾಪ್ತಿ, ವಾರ್ಡ್ 27 ಮಾರ್ನೋಮಿಬೈಲು, ಶಿವಮೊಗ್ಗ, ಕಾರ್ಪೋರೇಷನ್ ಅಸೆಸ್‌ಮೆಂಟ್ (ಖಾತಾ) ನಂ. 819/2/1670/2, ಪ್ಲಾಟ್ ನಂ. 40989, ಅಳತೆ 30X120 ಅಡಿ ಅಥವಾ 3600 ಚದರಡಿ, ಶ್ರೀ ರುಬೀನಾ ಇಲಿಯಾಸ್ ರವರಿಗೆ ಸೇರಿದೆ, ಚಕ್ಕುಬಂದಿ : ಉಳಿದ ಆಸ್ತಿ, ದಕ್ಷಿಣ : ರಸ್ತೆ, ಪೂರ್ವ : ಯಲ್ಲಪ್ಪ ಮನೆ, ಪಶ್ಚಿಮ : ಉಳಿದ ಆಸ್ತಿ.

ಮೀಸಲು ಬೆಲೆ	ಅರ್ನೆಸ್ಟ್ ಹಣ ಠೇವಣಿ	ಬಿಡ್ ಹೆಚ್ಚಳದ ಮೊತ್ತ	ಹರಾಜಿನ ದಿನಾಂಕ & ಸಮಯ	ಇಎಂಡಿ ಕೊನೆಯ ದಿನಾಂಕ & ಸಮಯ
Rs.1,60,85,600/-	Rs.16,08,560/-	Rs.1,00,000/-	28.09.2026 up to 06.00 P.M	29.09.2026 at 11.00 a.m to 12 Noon

ಟೆಂಡರ್-ಕಮ್-ಹರಾಜು ಮಾರಾಟದ ನಿಯಮಗಳು ಮತ್ತು ಷರತ್ತುಗಳು:

1) ಹರಾಜು ಮಾರಾಟವು "ಆನ್‌ಲೈನ್ ಇ-ಹರಾಜು" ಬಿಡ್ಡಿಂಗ್ ಆಗಿದ್ದು, ವೆಬ್‌ಸೈಟ್ **https://www.bankeauctions.com** ಮೊಬೈಲ್ ಅಪ್ಲಿಕೇಶನ್ ಮೂಲಕ ಮೇಲಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ ದಿನಾಂಕಗಳಲ್ಲಿ 5 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ ಇರುತ್ತದೆ. 2) ಆಸಕ್ತ ಬಿಡ್ಡರ್‌ಗಳು ತಮ್ಮ ಇಎಂಡಿಯನ್ನು https://www.bankeauctions.com ವೆಬ್ ಪೋರ್ಟಲ್ ಮೂಲಕ (ಬಳಕೆದಾರರ ಐಡಿ ಮತ್ತು ಪಾಸ್‌ವರ್ಡ್ ಅನ್ನು https://www.bankeauctions.com ನಲ್ಲಿ ಹೆಸರನ್ನು ನೋಂದಾಯಿಸುವ ಮೂಲಕ ಉಚಿತವಾಗಿ ಪಡೆಯಬಹುದು) ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಮೂಲಕ ಸಲ್ಲಿಸಬೇಕು. ಮೇಲಿನ "**ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸ್ ಲಿಮಿಟೆಡ್**" ಹೆಸರಿನಲ್ಲಿ ಪಡೆದ ಮೀಸಲು ಬೆಲೆಯ 10% ರ ಇಎಂಡಿಗೆ ಆರ್ಡರ್/ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಇಎಂಡಿಯನ್ನು ಪಾವತಿಸಬೇಕು. ವೆಬ್ ಪೋರ್ಟಲ್‌ನಲ್ಲಿ ಬಿಡ್ಡಾರರು ನೋಂದಾಯಿಸಿಕೊಂಡ ನಂತರ (ಒಂದು ಬಾರಿ), ಉದ್ದೇಶಿತ ಬಿಡ್‌ದಾರರು / ಖರೀದಿದಾರರು ಬಿಡ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯದ ಮೊದಲು ವೆಬ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿದ ಕೆಳಗಿನ ದಾಖಲೆಗಳ ಪ್ರತಿಗಳನ್ನು ಪಡೆಯಬೇಕಾಗುತ್ತದೆ. i) NEFT/RTGS ಚಲನ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ ಪ್ರತಿ; ii) ಪ್ಯಾನ್ ಕಾರ್ಡ್ ಪ್ರತಿ; iii) ಗುರುತಿನ ಪುರಾವೆ/ ವಿಳಾಸ ಪುರಾವೆ (KYC) ಅಂದರೆ ಮತದಾರರ ಗುರುತಿನ ಚೀಟಿ/ ಚಾಲನಾ ಪರವಾನಗಿ/ ಪಾಸ್‌ಪೋರ್ಟ್ ಇತ್ಯಾದಿಗಳ ಸ್ವಯಂ-ದೃಢೀಕೃತ ಪ್ರತಿ; ಇದು ಇಲ್ಲದೆ ಬಿಡ್ ತಿರಸ್ಕರಿಸಲ್ಪಡುತ್ತದೆ. ಅನುಬಂಧ-II ಮತ್ತು III ರ ಸ್ಕ್ಯಾನ್ ಮಾಡಿದ ಪ್ರತಿಯನ್ನು ಅಪ್‌ಲೋಡ್ ಮಾಡುವುದು (ವೆಬ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು: https//www.bankeauctions.com ಸರಿಯಾಗಿ ಭರ್ತಿ ಮಾಡಿ ಸಹಿ ಮಾಡಿದ ನಂತರ ಸಹ ಅಗತ್ಯವಾಗಿರುತ್ತದೆ. ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ರಚಿಸಲು, ಡೇಟಾವನ್ನು ಅಪ್‌ಲೋಡ್ ಮಾಡಲು, ಬಿಡ್ ದಾಖಲೆಗಳನ್ನು ಸಲ್ಲಿಸಲು, ಆನ್‌ಲೈನ್ ಇಂಟರ್-ಸೆ ಬಿಡ್ಡಿಂಗ್‌ನಲ್ಲಿ ತರಬೇತಿ/ಪ್ರದರ್ಶನ ಇತ್ಯಾದಿಗಳಲ್ಲಿ ಸಹಾಯದ ಅಗತ್ಯವಿರುವ ಆಸಕ್ತ ಬಿಡ್ಡರ್‌ಗಳು **ಮೆ॥ ಸಿ1 ಇಂಡಿಯಾ ಪ್ರೈ ಲಿ., ಉದ್ಯೋಗ್ ವಿಹಾರ್, ಫೇಸ್ 2, ಗಲ್ಫ್ ಪೆಟ್ರೋಕೆಮ್ ಕಟ್ಟಡ, ಕಟ್ಟಡ ಸಂಖ್ಯೆ 301, ಗುರಗಾಂವ್, ಹರಿಯಾಣ. ಪಿನ್: 122015, ಮೇಲ್ ಐಡಿ: support@bankeauctions.com, ಬೆಂಬಲ ಸಹಾಯವಾಣಿ ಸಂಖ್ಯೆಗಳು: 124-4302020/21/22/23, 7291981124 /1125/1126, ಮಾರಾಟ ವಿಚಾರಣೆಗಳು: sales@bankeauctions.com,** 3) ಬಿಡ್‌ದಾರರು ಹರಾಜಿನಲ್ಲಿ ಖುದ್ದಾಗಿ ಹಾಜರಿರಬೇಕು ಮತ್ತು ವೈಯಕ್ತಿಕವಾಗಿ ಭಾಗವಹಿಸಬೇಕು ಮತ್ತು ಅವರು ಸ್ವತಃ ಬಿಡ್ ಮಾಡುತ್ತಿದ್ದಾರೆ ಎಂದು ಲಿಖಿತ ಘೋಷಣೆಯನ್ನು ನೀಡಬೇಕು. ಯಾವುದೇ ಅಧಿಕೃತ ವ್ಯಕ್ತಿಗೆ ಅವಕಾಶವಿಲ್ಲ. 4) ಇಚ್ಛಿಸುವ ಬಿಡ್ಡರ್‌ಗಳು ಟೆಂಡರ್ ಫಾರ್ಮ್‌ಗಳನ್ನು ಮ್ಯಾನೇಜರ್, **ಮೆ॥. ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್. ನಂ.195/38, 1 ನೇ ಮಹಡಿ ಹೆಚ್‌ಡಿಎಫ್‌ಸಿ ಕಟ್ಟಡ 10 ನೇ ಅಡ್ಡ ರಸ್ತೆ, ವಿಲ್ಸನ್ ಗಾರ್ಡನ್ ಬೆಂಗಳೂರು-27** ಅವರಿಂದ ಪಡೆಯಬಹುದು. ಉದ್ದೇಶಿತ ಬಿಡ್ಡರ್‌ಗಳು ತಮ್ಮ ಬಿಡ್‌ಗಳನ್ನು ಅಧಿಕೃತ ಅಧಿಕಾರಿ, **ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್**ಗೆ ವಿಳಾಸ ನೀಡಿರುವ ಮೊಹರು ಮಾಡಿದ ಲಕೋಟೆಗಳಲ್ಲಿ ಸೂಚಿಸಲಾದ ಟೆಂಡರ್ ನಮೂನೆಯಲ್ಲಿ ಮಾತ್ರ ಸಲ್ಲಿಸಬೇಕು, ಜೊತೆಗೆ ಮೀಸಲು ಬೆಲೆಯ 10% ಇಎಂಡಿಗಾಗಿ ಪೇ ಆರ್ಡರ್/ಡಿಮಾಂಡ್ ಡ್ರಾಫ್ಟ್ ಅನ್ನು "ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್" ಹೆಸರಿನಲ್ಲಿ ಡ್ರಾ ಮಾಡಲಾಗಿದೆ ಮತ್ತು ಈ ಮೂಲಕ ತಿಳಿಸಲಾದ ಟೆಂಡರ್-ಕಮ್-ಹರಾಜು ಮಾರಾಟದ **ದಿನಾಂಕ 28.09.2026 ರಂದು ಸಂಜೆ 6** ಗಂಟೆಯೊಳಗೆ ಸಲ್ಲಿಸಬೇಕು. 5) ಆಸ್ತಿ ಮತ್ತು ಇತರ ವಿವರಗಳ ಪರಿಶೀಲನೆಗಾಗಿ, ಖರೀದಿದಾರರನ್ನು ಸಂಪರ್ಕಿಸಬಹುದು: **ಮೆ॥. ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್. ನಂ.195/38, 1 ನೇ ಮಹಡಿ ಹೆಚ್‌ಡಿಎಫ್‌ಸಿ ಕಟ್ಟಡ 10 ನೇ ಅಡ್ಡ ರಸ್ತೆ, ವಿಲ್ಸನ್ ಗಾರ್ಡನ್ ಬೆಂಗಳೂರು-27, ವ್ಯವಸ್ಥಾಪಕಿ - ಶ್ರೀಮತಿ ರಾಗಿಣಿ. ಎಂ. ಕೆ.- 9110609817 ಮತ್ತು ರಾಘವೇಂದ್ರ ರಾವ್ ಕೆ.ಆರ್-9620764555. ಆಸ್ತಿಯನ್ನು "ಎಲ್ಲಿದೆಯೋ ಹಾಗೆಯೇ" ಮತ್ತು "ಎಲ್ಲಿ ಏನಿದೆಯೋ ಹಾಗೆಯೇ" ಸ್ಥಿತಿಯ ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ.** 6) ಮೊಹರು ಮಾಡಿದ ಟೆಂಡರ್‌ಗಳನ್ನು ಇಲ್ಲಿ ತಿಳಿಸಲಾದ **ದಿನಾಂಕ 29.09.2026 ರಂದು ಬೆಳಿಗ್ಗೆ 11** ಗಂಟೆಯೊಳಗೆ ಉದ್ದೇಶಿತ ಬಿಡ್ಡರ್‌ಗಳ ಸಮ್ಮುಖದಲ್ಲಿ ತೆರೆಯಲಾಗುವುದು. ಸಾಮಾನ್ಯವಾಗಿ ಕ್ಲೋಸ್ಡ್ ಟೆಂಡರ್‌ಗಳ ಮೂಲಕವೂ ಇದೇ ರೀತಿ ನಡೆಯುತ್ತಿದ್ದರೂ, ಅಧಿಕೃತ ಅಧಿಕಾರಿಯು ತಮ್ಮ ಸ್ವಂತ ವಿವೇಚನೆಯಿಂದ, ಕ್ಲೋಸ್ಡ್ ಟೆಂಡರ್ ಪ್ರಕ್ರಿಯೆಯಲ್ಲಿ ಸ್ವೀಕರಿಸಿದ ಬಿಡ್‌ಗಿಂತ ಹೆಚ್ಚಿನ ಬಿಡ್ ಅನ್ನು ಉಲ್ಲೇಖಿಸಲು ಬಯಸುವ ಆಸಕ್ತ ಬಿಡ್ಡರ್‌ಗಳಲ್ಲಿ ಹರಾಜನ್ನು ನಡೆಸಬಹುದು ಮತ್ತು ಅಂತಹ ಸಂದರ್ಭದಲ್ಲಿ, ಹೆಚ್ಚಿನ ಬಿಡ್ ಮಾಡುವ ವ್ಯಕ್ತಿಗೆ ಮಾರಾಟವನ್ನು ನೀಡಲಾಗುತ್ತದೆ. ಆದಾಗ್ಯೂ, ಮಾರಾಟವು **ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್**ನ ದೃಢೀಕರಣಕ್ಕೆ ಒಳಪಟ್ಟಿರುತ್ತದೆ. 7) ಯಶಸ್ವಿ ಬಿಡ್ದಾರರು ಮಾರಾಟದ ಮೊತ್ತದ 25% (ಪಾವತಿಸಿದ ಇಎಂಡಿ ಸೇರಿದಂತೆ) ಅನ್ನು ಮಾರಾಟ ಪೂರ್ಣಗೊಂಡ ಅದೇ ದಿನ ಅಥವಾ ಮುಂದಿನ ಕೆಲಸದ ದಿನದ ನಂತರ ಪಾವತಿಸಬೇಕು ಮತ್ತು ಉಳಿದ 75% ಮೊತ್ತವನ್ನು ಮಾರಾಟ ದೃಢೀಕರಣ ದಿನಾಂಕದಿಂದ 15 ದಿನಗಳ ಒಳಗೆ ಪಾವತಿಸಬೇಕು, ಇಲ್ಲದಿದ್ದರೆ 25% ನ ಆರಂಭಿಕ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಯಾವುದೇ ಕಾರಣಕ್ಕೂ ಅದನ್ನು ಮರುಪಾವತಿಸಲಾಗುವುದಿಲ್ಲ. ಯಶಸ್ವಿ ಬಿಡ್ದಾರರು ಮೇಲೆ ತಿಳಿಸಿದಂತೆ ಸಂಪೂರ್ಣ ಬಿಡ್ ಮೊತ್ತದ 25% ಅನ್ನು ಪಾವತಿಸಲು ವಿಫಲವಾದರೆ, ಮುಂದಿನ ಯಶಸ್ವಿ ಬಿಡ್ದಾರರನ್ನು ಪರಿಗಣಿಸಲಾಗುತ್ತದೆ ಮತ್ತು ಮಾರಾಟವನ್ನು ಪೂರ್ಣಗೊಳಿಸಲು ಅರ್ಹರಾಗಿರುತ್ತಾರೆ. 8) ಇಲ್ಲಿ ನಿಗದಿಪಡಿಸಿದ ಸಮಯದ ಮಿತಿಯೊಳಗೆ ಸಂಪೂರ್ಣ ಮಾರಾಟದ ಪರಿಗಣನೆಯನ್ನು ಸ್ವೀಕರಿಸಿದ ನಂತರವೇ ಅಧಿಕೃತ ಅಧಿಕಾರಿಯು ಯಶಸ್ವಿ ಖರೀದಿದಾರರ ಪರವಾಗಿ ಮಾರಾಟ ಪ್ರಮಾಣಪತ್ರವನ್ನು ನೀಡುತ್ತಾರೆ. 9) ಯಶಸ್ವಿ ಖರೀದಿದಾರರು ಕಾನೂನಿನಡಿಯಲ್ಲಿ ಅನ್ವಯವಾಗುವ ಸ್ಟಾಂಪ್ ಡ್ಯೂಟಿ, ನೋಂದಣಿ ಶುಲ್ಕ ಇತ್ಯಾದಿ ಸಾಗಣೆಗೆ ಪಾವತಿಸಬೇಕಾದ ಶುಲ್ಕಗಳು/ಶುಲ್ಕಗಳನ್ನು ಭರಿಸುತ್ತಾರೆ. 10) ಯಶಸ್ವಿ ಬಿಡ್ದಾರರು ಸರ್ಕಾರ, ಸರ್ಕಾರಿ ಉದ್ಯಮ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಪಾವತಿಸಬೇಕಾದ ಶಾಸನಬದ್ಧ ಬಾಕಿಗಳು (ಕಾನೂನುಬದ್ಧ ಮನೆ ತೆರಿಗೆ, ವಿದ್ಯುತ್ ಶುಲ್ಕಗಳು ಮತ್ತು ಇತರ ಬಾಕಿಗಳು), ಟಿಡಿಎಸ್, ಜಿಎಸ್ಟಿ ಯಾವುದಾದರೂ ಇದ್ದರೆ ಅವುಗಳನ್ನು ಪಾವತಿಸಬೇಕು. 11) ಅಧಿಕೃತ ಅಧಿಕಾರಿಯು ಯಾವುದೇ ಅಥವಾ ಎಲ್ಲಾ ಆಫರ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಾಗೂ ಯಾವುದೇ ಕಾರಣವನ್ನು ನೀಡದೆ ಹರಾಜನ್ನು ಮುಂದೂಡುವ/ಮುಂದೂಡುವ/ರದ್ದುಗೊಳಿಸುವ ಸಂಪೂರ್ಣ ಹಕ್ಕನ್ನು ಹೊಂದಿರುತ್ತಾರೆ. ಯಾವುದೇ ಕಾರಣವನ್ನು ನೀಡದೆ ಮಾರಾಟದ ಯಾವುದೇ ನಿಯಮಗಳು ಮತ್ತು ಷರತ್ತುಗಳನ್ನು ಮಾರ್ಪಡಿಸಬಹುದು. ಅಲ್ಲದೆ, ಯಾವುದೇ ಪೂರ್ವ ಸೂಚನೆ ಇಲ್ಲದೆ ಮಾರಾಟದ ಯಾವುದೇ ನಿಯಮಗಳು ಮತ್ತು ಷರತ್ತುಗಳನ್ನು ಮಾರ್ಪಡಿಸುವ ಸಂಪೂರ್ಣ ಹಕ್ಕನ್ನು ಹೊಂದಿರುತ್ತಾರೆ.

ದಿನಾಂಕ : 20.08.2026, ಸ್ಥಳ : ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿ, ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸ್ ಲಿಮಿಟೆಡ್ ಪರವಾಗಿ

ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್

ನೋಂದಾಯಿತ ಕಛೇರಿ: ರಾಧಿಕಾ, 2ನೇ ಮಹಡಿ, ಲಾ ಗಾರ್ಡನ್ ರಸ್ತೆ, ನವರಂಗ್‌ಪುರ್, ಅಹಮದಾಬಾದ್-09.
ಶಾಖಾ ಕಛೇರಿ : ಸಂ. 195/38, 1ನೇ ಮಹಡಿ, ಹೆಚ್‌ಡಿಎಫ್‌ಸಿ ಕಟ್ಟಡ, 10ನೇ ಅಡ್ಡರಸ್ತೆ, ವಿಲ್ಸನ್ ಗಾರ್ಡನ್ ಬೆಂಗಳೂರು-27.
Web:www.hdbfs.com, Email ID: compliance@hdfs.com

ಇ-ಹರಾಜು ಮಾರಾಟ ಸೂಚನೆ

(ಸಾಲಗಾರರು/ಸಹ - ಅರ್ಜಿದಾರರು/ಸಾರ್ವಜನಿಕರಿಗೆ) (2002ರ ಸರ್ಫೇಸಿ ಕಾಯ್ದೆಯ ನಿಯಮ 9(1)ರ ಜೊತೆಗೆ ಓದಿಕೊಳ್ಳಬೇಕಾದ ನಿಯಮ ಆರ್/ಡಬ್ಲ್ಯು 8(6)ರಡಿ)

ಕೆಳಸಹಿದಾರರು, **ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್**ನಲ್ಲಿ ಅಧಿಕೃತ ಅಧಿಕಾರಿಯಾಗಿದ್ದು, ಕೆಳಕಂಡ ಸಾಲ ಖಾತೆಗಳಿಗೆ ಸೇರಿದ ಆಸ್ತಿಗಳನ್ನು ''ಎಲ್ಲಿ ಏನಿದೆಯೋ ಮತ್ತು ಎಲ್ಲಿ ಹೇಗಿದೆಯೇ ಹಾಗೆಯೇ ಆಧಾರದಲ್ಲಿ'' ಮಾರಾಟ ಮಾಡಬಹುದಾದ ಹಕ್ಕಿನೊಂದಿಗೆ, 2002ರ ಹಣಕಾಸು ಆಸ್ತಿಗಳ ಪ್ರಭೂತೀಕರಣ ಮತ್ತು ಪುನರ್‌ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯಡಿ ಸ್ವಾಧೀನತೆಗೆ ಪಡೆದುಕೊಂಡಿರುತ್ತಾರೆ.

ಅರ್ಜಿದಾರರು ಮತ್ತು ಸಹ-ಅರ್ಜಿದಾರ ಹೆಸರು ಮತ್ತು ವಿಳಾಸ: **1. ಎಸ್‌ವಿ ಪ್ಲೇವುಡ್ ಮತ್ತು ಹಾರ್ಡ್‌ವೇರ್** , ನೆಲಮಹಡಿ, ಖಾತಾ ಸಂ. 207/1, 203/1, 618/1, ವೆಂಕಟಗಿರಿ ಕಟ್ಟಡ, 2ನೇ ಕ್ರಾಸ್, ಗಾರ್ಡನ್ ಪ್ರದೇಶ ಶಿವಮೊಗ್ಗ, ಶಿವಮೊಗ್ಗ- 577202, ಕರ್ನಾಟಕ. **ಅಲ್ಲದೇ:** ಆಸ್ತಿ ಸಂ. 809/1, 960/1, ಪರಶಿವಮೂರ್ತಿ ರವಿವರ್ಮ ಬೀದಿ, ಶಿವಮೊಗ್ಗ, ಶಿವಮೊಗ್ಗ- 577201 **2. ಪುಷ್ಪ ಬಿ, ಪರಮಶಿವ ಕೆಪಿ ರವರ ಪತ್ನಿ,** 55, ಸುಮೇಗ, ರವಿವರ್ಮ ಬೀದಿ, ಕೆಆರ್ ಪುರಂ, ಶಿವಮೊಗ್ಗ, ಶಿವಮೊಗ್ಗ- 577201, ಕರ್ನಾಟಕ. **3. ರಾಜು,ಕೆಪಿ, ಪರಮಶಿವ ರವರ ಮಗ,** 51/2, ಸುಮೇಗ, ರವಿವರ್ಮ ಬೀದಿ, ಕೆಆರ್ ಪುರಂ, ಶಿವಮೊಗ್ಗ, ಶಿವಮೊಗ್ಗ- 577202, ಕರ್ನಾಟಕ. **4. ಪರಮಶಿವಪ್ಪ ಬಿ, ಬಸಪ್ಪ ರವರ ಮಗ,** 55/1, ಸುಮೇಗ, ರವಿವರ್ಮ ಬೀದಿ, ಕೆಆರ್ ಪುರಂ, ಶಿವಮೊಗ್ಗ, ಶಿವಮೊಗ್ಗ- 577202, ಕರ್ನಾಟಕ. ಖಾತಾ ಸಂ. **44537165, ಒಟ್ಟಾರೆ ಬಾಕಿ ಮೊತ್ತ: ರೂ. 49,35,911.47/-, (ರೂಪಾಯಿ ನಲವತ್ತೊಂಭತ್ತು ಲಕ್ಷದ ಮೂವತ್ತೈದು ಸಾವಿರದ ಒಂಭೈನೂರ ಹನ್ನೊಂದು ರೂ. ಪೈಸೆ ನಲವತ್ತೇಳು ರೂ.ಗಳು ಮಾತ್ರ) 19.08.2026** ರಂದು ಇದ್ದಂತೆ, ಹೆಚ್ಚಿನ ಬಡ್ಡಿ, ಪ್ರಾಸಂಗಿಕ ವೆಚ್ಚ, ಪೂರ್ಣ ಪಾವತಿಯ ದಿನಾಂಕದ ವರೆಗೂ. ಭದ್ರತಾ ಸಾಲಿಗರ ಋಣಬಾಧ್ಯತೆ ಇತರೆ ಯಾವುದೇ ವಿವರಗಳು- ನಿಲ್.

ಸ್ಥಿರಾಸ್ತಿಯ ವಿವರಗಳು ಸಕಲ ಸಮಸ್ತವೂ ಸೇರಿದಂತೆ ವಾಣಿಜ್ಯ ಮತ್ತು ವಸತಿ ಕಟ್ಟಡದ ಆಸ್ತಿ, ಶಿವಮೊಗ್ಗ ನಗರ ಕಾರ್ಪೋರೇಷನ್ ವ್ಯಾಪ್ತಿಯಲ್ಲಿದ್ದು, ವಾರ್ಡ್ ಸಂ. 23, ರವಿವರ್ಮ ಬೀದಿ, ಶಿವಮೊಗ್ಗ, ಕಾರ್ಪೋರೇಷನ್ ಅಸೆಸ್‌ಮೆಂಟ್ (ಖಾತಾ) ಸಂ. 809/2-809/2-960/2 (ಹಳೇ ಖಾತಾ ಸಂ. 987/1-960/1954/1-853/1 ಮತ್ತು 960/1- 960-954) ಪಿಐಡಿ ಸಂ. 32466, ಅಳತೆ: 7.3x96 ಅಡಿ, ಅಥವಾ ಒಟ್ಟು 700 ಚದರ ಅಡಿ, ಚಕ್ಕುಬಂದಿ :- ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಕನ್ಸರ್‌ವೆನ್ಸಿ, ಪೂರ್ವಕ್ಕೆ : ಪಾಲಾಕ್ಷಪ್ಪ ರವರ ಆಸ್ತಿ, ಪಶ್ಚಿಮಕ್ಕೆ: ಕೆಬಿ ಪರಶಿವಮೂರ್ತಿ ಮತ್ತು ಪುಷ್ಪಾವತಿ ರವರ ಆಸ್ತಿ.

ಮೀಸಲು ಬೆಲೆ	ಅರ್ನೆಸ್ ಮನಿ ಡಿಪಾಸಿಟ್	ಬಿಡ್ ಹೆಚ್ಚಳದ ಮೊತ್ತ	ಹರಾಜಿನ ದಿನಾಂಕ ಮತ್ತು ಸಮಯ	ಇಎಂಡಿ ಕೊನೆ ದಿನಾಂಕ ಮತ್ತು ಸಮಯ
Rs.75,20,280/-	Rs.7,52,028/-	Rs.1,00,000/-	28.09.2026 ಸಂಜೆ 06.00ರವರೆಗೆ	29.09.2026 ಬೆ. 11.00 ರಿಂದ ಮಧ್ಯಾಹ್ನ 12ರ ವರೆಗೆ

ಷರತ್ತು ಮತ್ತು ನಿಬಂಧನೆಗಳು ಟೆಂಡರ್-ಕಂ-ಹರಾಜು ಮಾರಾಟ:

1) ಹರಾಜು ಮಾರಾಟವು ''ಆನ್‌ಲೈನ್ ಇ-ಹರಾಜು'' ಆಗಿದ್ದು, ವೆಬ್‌ಸೈಟ್ **https://www.bankeauctions.com** ಮೂಲಕ ನಡೆಯುತ್ತದೆ. 5 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ ಮೇಲಿನ ಕೋಷ್ಟಕದ ಮೊಬೈಲ್ ಆ್ಯಪ್‌ನಲ್ಲಿ ವಿವರಿಸಲಾಗಿದೆ. 2) ಇಚ್ಛೆಯುಳ್ಳ ಬಿಡ್‌ದಾರರು ಇಎಂಡಿಯನ್ನು ವೆಬ್ ಪೋರ್ಟಲ್ **https://www.bankeauctions.com** ಮೂಲಕ (ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ನ್ನು ಉಚಿತವಾಗಿ **https://www.bankeauctions.com**)ನಲ್ಲಿ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಮೂಲಕ ಪಡೆದುಕೊಳ್ಳಬೇಕು. ಇಎಂಡಿ ಮೀಸಲು ಬೆಲೆಯ 10% ರಷ್ಟು ಇಎಂಡಿಯನ್ನು ''ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್'' ಹೆಸರಿಗಿರುವ ಪೇ-ಆರ್ಡರ್/ಡಿಮಾಂಡ್ ಡ್ರಾಫ್ಟ್ ಮೂಲಕ ಪಾವತಿಸಬೇಕು ಮೇಲೆ ತಿಳಿಸಿದ ರಿಜಿಸ್ಟ್ರೇಷನ್ (ಒಂದು ಸಲ)ಅನ್ನು ಬಿಡ್‌ದಾರರು ವೆಬ್‌ಪೋರ್ಟಲ್‌ನಲ್ಲಿ ಮಾಡಿಕೊಳ್ಳಬೇಕು ತದನಂತರ ಇಚ್ಛೆಯುಳ್ಳ ಬಿಡ್‌ದಾರರು/ಖರೀದಿದಾರರು ಕೆಳಕಂಡ ದಾಖಲೆಗಳನ್ನು ಅಂದರೇ i)ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಚಲನ್ ಅಥವಾ ಡಿಮಾಂಡ್ ಡ್ರಾಫ್ಟ್ ii) ಪ್ಯಾನ್ ಕಾರ್ಡ್ ಕಾಪಿ iii) ಗುರ್ತಿನ ವಿಳಾಸದ ಪುರಾವೆ (ಕೆವೈಸಿ) ಅಂದರೇ ಸ್ವ-ದೃಢೀಕೃತ ಐಡಿ ಕಾರ್ಡ್/ ಡ್ರೈವಿಂಗ್ ಲೈಸನ್ಸ್/ಪಾಸ್‌ಪೋರ್ಟ್ ಇತ್ಯಾದಿ ಇವುಗಳನ್ನು ಪೋರ್ಟಲ್‌ನೊಂದಿಗೆ ಅಪ್‌ಲೋಡ್ ಮಾಡಿ ನೋಂದಾಯಿಸಿಕೊಳ್ಳಬೇಕು. ಇಲ್ಲದಿದ್ದಲ್ಲಿ ಬಿಡ್ ತಿರಸ್ಕೃತವಾಗುವುದು. ಅನೆಕ್ಸರ್-II & IIIರ ಸ್ಕಾನ್ ಮಾಡಿದ ಪ್ರತಿಯನ್ನು ಅಪ್‌ಲೋಡಿಂಗ್ (ವೆಬ್ ಪೋರ್ಟಲ್ **https://www.bankeauctions.com** ನಲ್ಲಿ ಅಪ್‌ಲೋಡ್ ಮಾಡಬಹುದು) ಭರ್ತಿ ಮಾಡಿದ ನಂತರ ಮತ್ತು ಸಹಿ ಹಾಕುವುದು ಸಹ ಅಗತ್ಯವಿರುತ್ತದೆ. ಇಚ್ಛೆಯುಳ್ಳ ಬಿಡ್‌ದಾರರಿಗೆ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಮಾಡಿಕೊಳ್ಳಲು ನೆರವು ಹಾಗೂ ಆನ್‌ಲೈನ್ ಇಂಟರ್ ಸೇ ಬಿಡ್ಡಿಂಗ್ ಇತ್ಯಾದಿಗಾಗಿನ ತರಬೇತಿ/ಪ್ರಾತ್ಯಕ್ಷಿಕೆ ಬೇಕಾದಲ್ಲಿ ಮೆ॥ ಸಿ1 ಇಂಡಿಯಾ ಪ್ರೈ.ಲಿ., ಉದ್ಯೋಗ್ ವಿಹಾರ್, ಫೇಸ್-2, ಗಲ್ಫ್ ಪೆಟ್ರೋಕೆಮ್ ಕಟ್ಟಡ, ಕಟ್ಟಡದ ಸಂ. ಗುರಗಾವ್, ಹರಿಯಾಣ. ಪಿಐಎನ್: 122015, ಇ-ಮೇಲ್ ಐಡಿ:**support@bankeauctions.com, Support Helpline Numbers:** 124-4302020/21/22/23, 7291981124/ 1125/1126, ಮಾರಾಟದ ವಿಚಾರಣೆಗಾಗಿ: **sales@bankeauctions.com, 7291981129**) 3) ಇಚ್ಛೆಯುಳ್ಳ ಬಿಡ್‌ದಾರರು ಹರಾಜಿನಲ್ಲಿ ವೈಯುಕ್ತಿಕವಾಗಿ ಹಾಜರಿದ್ದು ಮತ್ತು ವೈಯುಕ್ತಿಕವಾಗಿ ಭಾಗವಹಿಸಬೇಕು ಮತ್ತು ಅವನು/ಅವಳು ಅವನಿಗಾಗಿ/ಅವಳಿಗಾಗಿ ಬಿಡ್ ಸಲ್ಲಿಸುತ್ತಿರುವ ಬಗ್ಗೆ ಲಿಖಿತವಾಗಿ ಘೋಷಣೆ ನೀಡಬೇಕು. ಯಾವುದೇ ಅಧಿಕಾರ ಪಡೆದ ವ್ಯಕ್ತಿಗೆ ಅನುಮತಿಯಿರುವುದಿಲ್ಲ. 4)ಇಚ್ಛೆಯುಳ್ಳ ಬಿಡ್‌ದಾರರು ಟೆಂಡರ್ ಫಾರಂಗಳನ್ನು ವ್ಯವಸ್ಥಾಪಕರು **ಮೆ॥ ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್, ಸಂ. 195/38, 1ನೇ ಮಹಡಿ, ಹೆಚ್‌ಡಿಎಫ್‌ಸಿ ಕಟ್ಟಡ, 10ನೇ ಕ್ರಾಸ್ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು- 27.** ಇಲ್ಲಿಂದ ಪಡೆಯಬಹುದಾಗಿದೆ. ಇಚ್ಛೆಯುಳ್ಳ ಬಿಡ್‌ದಾರರು ಅವರ ಬಿಡ್‌ಗಳನ್ನು ನಿಗದಿತ ಟೆಂಡರ್ ನಮೂನೆಯಲ್ಲಿ ಮೊಹರಾದ ಲಕೋಟೆಯಲ್ಲಿಟ್ಟು **ಅಧಿಕೃತ ಅಧಿಕಾರಿಗಳು ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್** ಇವರಿಗೆ ಮೀಸಲು ಬೆಲೆಯ 10% ರಷ್ಟು ಮೌಲ್ಯದ **''ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್''** ಪದನಾಮಕ್ಕಿರುವ ಇಎಂಡಿಗಾಗಿನ ಪೇ ಆರ್ಡರ್/ಡಿಮಾಂಡ್ ಡ್ರಾಫ್ಟ್‌ನೊಂದಿಗೆ ಟೆಂಡರ್-ಕಂ-ಹರಾಜು ಮಾರಾಟವು ಅಧಿಸೂಚಿತಗೊಂಡಿರುವ ದಿನಾಂಕ **25.03.2025 ಸಂಜೆ 6ಕ್ಕೆ** ಅಥವಾ ಮುಂಚಿತವಾಗಿ ಸಲ್ಲಿಸಬೇಕು. 5) ಆಸ್ತಿಯ ಪರಿಶೀಲನೆ ಮತ್ತು ಇತರೆ ವಿವರಗಳಿಗಾಗಿ: **ಮೆ॥ ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್, ಸಂ. 195/38, 1ನೇ ಮಹಡಿ, ಹೆಚ್‌ಡಿಎಫ್‌ಸಿ ಕಟ್ಟಡ, 10ನೇ ಕ್ರಾಸ್ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು- 27. ಮೇನೇಜರ್, ಶ್ರೀಮತಿ ರಾಗಿಣಿ ಎಂ.ಕೆ. - 9110609817 ಮತ್ತು ರಾಘವೇಂದ್ರ ರಾವ್ ಕೆಆರ್-9620764555,** ಇವರನ್ನು ಸಂಪರ್ಕಿಸಬೇಕು, ಆಸ್ತಿಯನ್ನು **''ಎಲ್ಲಿ ಹೇಗಿದೆಯೋ ಹಾಗೆಯೇ ಮತ್ತು ಎಲ್ಲಿ ಏನಿದೆಯೋ ಹಾಗೆಯೇ''** ಆಧಾರದ ಸ್ಥಿತಿಯಲ್ಲಿ ಮಾರಾಟ ಮಾಡಲಾಗುತ್ತದೆ. 6)ಮುಚ್ಚಿದ ಟೆಂಡರ್‌ಗಳನ್ನು ಹಾಜರಿರಲು ಇಚ್ಛೆಯುಳ್ಳ ಬಿಡ್‌ದಾರರ ಹಾಜರಾತಿಯಲ್ಲಿ ಅಧಿಸೂಚಿಸಿರುವ ಟೆಂಡರ್ ಕಂ ಹರಾಜು ದಿನಾಂಕವಾದ **29.09.2026ರ ಬೆಳಿಗ್ಗೆ 11ಕ್ಕೆ** ತೆರೆಯಲಾಗುತ್ತದೆ. ಇದು ಸಾಮಾನ್ಯವಾದ ಅಂದರೆ ಮುಚ್ಚಿದ ಟೆಂಡರ್‌ಗಳ ರೀತಿಯಲ್ಲಿರುತ್ತದೆ. ಈ ಮುಚ್ಚಿದ ಟೆಂಡರ್ ಪ್ರಕ್ರಿಯೆಯು ಮುಗಿಸಿದ ನಂತರ ಸ್ವೀಕರಿಸಲಾದ ಮೊತ್ತಕ್ಕಿಂತ ಹೆಚ್ಚಿಗೆ ಮೊತ್ತವನ್ನು ಯಾವುದೇ ಆಸಕ್ತಿಯುಳ್ಳ ಬಿಡ್‌ದಾರರು ಕೋಟ್ ಮಾಡಲು ಅಪೇಕ್ಷಿಸಿದಾಗ ಅಧಿಕೃತ ಅಧಿಕಾರಿಯು ತಮ್ಮ ವಿವೇಚನಾನುಸಾರ ಅಂತಹ ಬಿಡ್‌ದಾರರೊಳಗೆ ಮುಕ್ತ ಬಿಡ್ ನಡೆಸಬಹುದು, ಇಂತಹ ಮುಕ್ತ ಬಿಡ್‌ನಲ್ಲಿ ಗರಿಷ್ಠ ಬಿಡ್ ಕೂಗುವವರಿಗೆ ಆಸ್ತಿ ಮಾರಾಟವನ್ನು ಸ್ಥಿರಪಡಿಸಬಹುದಾಗಿರುತ್ತದೆ. ಮಾರಾಟವು **ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್** ದೃಢೀಕರಣಕ್ಕೆ ಬದ್ಧವಾಗಿರಬೇಕಾಗುತ್ತದೆ. 7) ಯಶಸ್ವಿ ಬಿಡ್‌ದಾರರು ಮಾರಾಟ ಮೌಲ್ಯದ 25% ರಷ್ಟನ್ನು (ಇಎಂಡಿ ಸೇರಿದಂತೆ) ಅದೇ ದಿನ ಕೂಡಲೇ ಮಾರಾಟ ಮುಗಿದ ನಂತರ ಕೆಲಸದ ದಿನದಿಂದ ಪಾವತಿಸಬೇಕು. ಉಳಿದ 75% ರಷ್ಟನ್ನು ಮಾರಾಟ ದೃಢೀಕರಣ ದಿನಾಂಕದಿಂದ 15 ದಿನಗಳ ಒಳಗೆ ಪಾವತಿಸಬೇಕು, ವಿಫಲರಾದಲ್ಲಿ 25% ರಷ್ಟು ಆರಂಭಿಕ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವದು. 8) ಯಾವುದೇ ಸಂದರ್ಭದಲ್ಲೂ ಮರುಪಾವತಿಸಲಾಗುವುದಿಲ್ಲ, ಯಶಸ್ವಿ ಬಿಡ್‌ದಾರರು ಮೇಲೆ ತಿಳಿಸಿದಂತೆ ಬಿಡ್‌ನ ಒಟ್ಟಾರೆ 25% ಮೊತ್ತವನ್ನು ಪಾವತಿ ಮಾಡಲು ವಿಫಲರಾದಲ್ಲಿ ನಂತರದ ಯಶಸ್ವಿ ಬಿಡ್‌ದಾರರನ್ನು ಮಾರಾಟವನ್ನು ಮುಕ್ತಾಯಗೊಳಿಸುವುದಕ್ಕಾಗಿ ಪರಿಗಣಿಸಲಾಗುವುದು. 9) ನಿಗದಿತ ಅವಧಿಯೊಳಗಾಗಿ ಹರಾಜು ಮೊತ್ತವನ್ನು ಪೂರ್ಣಪಾವತಿಯಾದ ನಂತರ ಮಾತ್ರವೇ ಯಶಸ್ವಿ ಬಿಡ್‌ದಾರರ ಹೆಸರಿನಲ್ಲಿ ಅಧಿಕೃತ ಅಧಿಕಾರಿಯವರು ಮಾರಾಟ ದೃಢೀಕರಣ ಪತ್ರ ವಿತರಿಸುತ್ತಾರೆ. 10)ಯಶಸ್ವಿ ಬಿಡ್‌ದಾರರೇ, ಕಾನೂನಿನಂತೆ ಅನ್ವಯಿಸುವ ಆಸ್ತಿಗಾಗಿನ ಕನ್ವೆಯನ್ಸಿಗಾಗಿನ ಛಾರ್ಜ್‌ಗಳು/ ಶುಲ್ಕಗಳು, ಮುದ್ರಾಂಕ ಶುಲ್ಕ, ನೋಂದಾವಣಿ ಶುಲ್ಕ ಇತ್ಯಾದಿಗಳನ್ನೆ ಭರಿಸಬೇಕಾಗುತ್ತದೆ. 11) ಯಶಸ್ವಿ ಬಿಡ್‌ದಾರರು ಸ್ಥಾನಿಕ ಬಾಕಿಗಳೇನಾದರೂ ಇದ್ದಲ್ಲಿ (ನ್ಯಾಯ ಬದ್ಧ ಹೌಸ್‌ಟ್ಯಾಕ್ಸ್, ಎಲೆಕ್ಟ್ರಿಸಿಟಿ ಛಾರ್ಜಸ್ ಮತ್ತಿತರ ಬಾಕಿಗಳನ್ನು) ಸರ್ಕಾರಕ್ಕೆ ಯಾವುದೇ ಟಿಡಿಎಸ್, ಜಿಎಸ್‌ಟಿ, ಸರ್ಕಾರಿ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆಗಳೇನಾದರೂ ಬಾಕಿಯಿದ್ದರೆ ಅಂತಹವುಗಳನ್ನು ಪಾವತಿಸಬೇಕಾಗಿರುತ್ತದೆ. ಅಧಿಕೃತ ಅಧಿಕಾರಿಯು ಯಾವುದೇ ಕಾರಣ ನೀಡದೇ ಮತ್ತು ಯಾವುದೇ ಸೂಚನೆ ಕೊಡದೇ ಯಾವುದೇ ಟೆಂಡರ್ ಅಥವಾ ಬಿಡ್ ಅಥವಾ ಎಲ್ಲಾ ಆಫರ್‌ಗಳನ್ನು ಒಪ್ಪಿಕೊಳ್ಳಲು/ತಿರಸ್ಕರಿಸಲು/ಮುಂದೂಡಬಹುದಾದ ಹಾಗೂ ಮಾರಾಟದ ಷರತ್ತು ನಿಬಂಧನೆಗಳ ಮಾರ್ಪಾಡುಗೊಳಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ದಿನಾಂಕ: 20-08-2026, ಸ್ಥಳ: ಬೆಂಗಳೂರು
ಸಹಿ/ -ಅಧಿಕೃತ ಅಧಿಕಾರಿ, ಮೆ॥ ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್

ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿ., ಕಾರವಾರ

ಪ್ರಧಾನ ಕಛೇರಿ: 'ರೋಸರಿ ಡೇಲ್', ಕೇಶವ್ ಶೆಟ್ ರಸ್ತೆ,
1ನೇ ಕ್ರಾಸ್, ಸೋನಾರವಾಡ, ಕಾರವಾರ - 581304
ಫೋನ್: 08382-223600, ಮೊ: 7829155585

ಸ್ವಾಧೀನ ಸೂಚನೆ (See rule 08 (1)

ಕೆಳಸಹಿದಾರರು **ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿ.,** ಅಧಿಕಾರಿಯಾಗಿ 2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ (2002 ರ 54ನೇ ಆ್ಯಕ್ಟ್) ಕಾಯಿದೆ ಮತ್ತು 2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 3 ರ ಜೊತೆ ಓದಿಕೊಳ್ಳಬೇಕಾದ 2002ರ ಇನ್ನು ಮುಂದೆ (ಆಕ್ಟ್" ಎಂದು ಉಲ್ಲೇಖಿಸಿದೆ) ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಕಾಯಿದೆಯ ಕಲಂ 13(12) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ **06-03-2026** ರ ಡಿಮ್ಯಾಂಡ್ ನೋಟೀಸನ್ನು ಜಾರಿ ಮಾಡಿ **ಸಾಲಗಾರ ಹಾಗೂ ಜಾಮೀನುದಾರರಾದ: 1) ಶ್ರೀ. ಅರುಣ್ ಜೆ. ಎ, ಬಿನ್ ಜೋನಾಸ್ ಎಂ, ವಾಸ: ಹೊಂಬೆಳಕು ಹಚ್ ಟವರ್ ಪಕ್ಕ, ವಾಟರ್ ಟ್ಯಾಂಕ್ ಹತ್ತಿರ, ರಂಗನಾಥ ಬಡಾವಣೆ, ಗೋಪಾಳ, ಶಿವಮೊಗ್ಗ - 577201, 2)ಶ್ರೀಮತಿ. ಭಾನು ಪ್ರಕಾಶ್ ಕೋಂ ಅರುಣ್ ಜೆ ಎ, ವಾಸ; ಹಚ್ ಟವರ್ ಹತ್ತಿರ, ರಂಗನಾಥ ಬಡಾವಣೆ ಗೋಪಾಳ, ಶಿವಮೊಗ್ಗ 577201, 3) ಶ್ರೀ ಯೇಸುದಾಸ್ ಪ್ರೀತಂ, ಬಿನ್ ಅಂತೋನಿ ರಾಜ್, ವಾಸ: ವಿದ್ಯಾನಗರ, ಕಂಟ್ರಿ ಕ್ಲಬ್, ರಸ್ತೆ, ಶಿವಮೊಗ್ಗ 577201, 4) ಶ್ರೀ ಎನೋಸ್ ಶರಣ್ ಕುಮಾರ್ ಬಿನ್ ಗುಡ್ವಿನ್ ಸದಾನಡ #10-1 ಶಲುಮ್ ಹಿಂಭಾಗ, ಜ್ಯೂವೆಲ್‌ರಾಕ್ ಹೋಟೇಲ್ ರಸ್ತೆ, ಹೊಸ ಮಿಷನ್ ಕಾಂಪೌಂಡ್, ಶಿವಮೊಗ್ಗ.** ನೋಟಿಸಿನಲ್ಲಿ ಇದ್ದಂತೆ ಸಾಲದ ಮೊತ್ತ **ರೂ.1,05,29,009.00/- (ರೂಪಾಯಿ ಒಂದು ಕೋಟಿ ಐದು ಲಕ್ಷದ ಇಪ್ಪತ್ತೊಂಭತ್ತು ಸಾವಿರದ ಒಂಭತ್ತು ಮಾತ್ರ)** ಬಡ್ಡಿ ನೋಟೀಸನ್ನು ಸ್ವೀಕರಿಸಿದ 60 ದಿನದೊಳಗಾಗಿ ಪಾವತಿ ಮಾಡಲು ಸೂಚಿಸಿದ್ದರು.

ಸಾಲಗಾರರು ಬಾಕಿ ಸಾಲದ ಮೊತ್ತವನ್ನು ಮರುಪಾವತಿ ಮಾಡಲು ವಿಫಲರಾಗಿದ್ದು, ಸಾಲಗಾರರು/ಜಾಮೀನುದಾರರು/ ಅಡಮಾನದಾರರುಗಳಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಶೇಷವಾಗಿ ನೋಟೀಸ್ ನೀಡಿ ತಿಳಿಯಪಡಿಸುವುದೇನೆಂದರೆ ಕೆಳಸಹಿದಾರರು ಸದರಿ ನಿಯಮಗಳ ನಿಯಮ 8ರ ಜೊತೆಗೆ ಓದಿಕೊಳ್ಳಬೇಕಾದ ಸದರಿ ಕಾಯಿದೆಯ ಕಲಂ 13(4) ರಡಿ ಅವರಿಗೆ ಪ್ರದತ್ತವಾದ ಅಧಿಕಾರಗಳಂತೆ ಇದೆ **2026 ರ ಆಗಸ್ಟ್ ಮಾಹೆಯ 19ನೇ ದಿನದಂದು** ಕೆಳಕಂಡಂತೆ ವಿವರಿಸಲಾದ ಆಸ್ತಿಗಳ ಸ್ವಾಧೀನತೆಯನ್ನು ಪಡೆದುಕೊಂಡಿರುತ್ತಾರೆ.

ಸಾಲಗಾರರಿಗೆ ನಿರ್ದಿಷ್ಟವಾಗಿ ವಿಸ್ತಾರವಾಗಿ ನೀಡುವ ಎಚ್ಚರಿಕೆಯೇನೆಂದರೆ ಸದರಿ ಆಸ್ತಿಗಳ ಬಗ್ಗೆ ಯಾರೂ ಯಾರ ಜೊತೆಗೂ ಯಾವುದೇ ರೀತಿಯ ವ್ಯವಹಾರ ಮಾಡಬಾರದು ಮಾಡಿದ್ದೆ ಆದರೆ **ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿ.,** ಇವರಿಗೆ ಸಂದಾಯವಾಗತಕ್ಕ ಸಾಲದ ಬಾಬ್ತು **ರೂ.1,09,82,478.00/- (ರೂಪಾಯಿ ಒಂದು ಕೋಟಿ ಒಂಭತ್ತು ಲಕ್ಷದ ಎಂಭತ್ತೆರಡು ಸಾವಿರ ಮತ್ತು ನಾಲ್ಕುನೂರಾ ಎಪ್ಪತ್ತೆಂಟು ಮಾತ್ರ)** ಬಡ್ಡಿ ಹಾಗೂ ಇತರೆ ವೆಚ್ಚ ಇವುಗಳಿಗೆ ಋಣಬಾಧ್ಯವಾಗಿರುತ್ತದೆ. ಸಾಲಗಾರರ ಗಮನವನ್ನು ಕಾಯಿದೆಯ ಕಲಂ 13(8)ರ ಬಗ್ಗೆ ಸೆಳೆಯಲಾಗಿದೆ ಇದರಲ್ಲಿ ಭದ್ರತಾ ಆಸ್ತಿಗಳನ್ನು ಬಿಡಿಸಿಕೊಳ್ಳಲು ಲಭ್ಯವಿರುವ ಸಮಯಾವಕಾಶದ ಬಗ್ಗೆ ತಿಳಿಸಲಾಗಿದೆ.

ಸ್ಥಿರ ಆಸ್ತಿಯ ವಿವರಣೆ

ಈ ಆಸ್ತಿಯ ಎಲ್ಲಾ ಭಾಗವು ಮತ್ತು ಆಸ್ತಿಯ ಮುನ್ಸಿಪಲ್ ಖಾತಾ ನಂ.699-603-ಎ, ಪ್ಲಾಟ್ ನಂ.1 ಮತ್ತು 2, ಆಸ್ತಿಯ ಅಳತೆ ಒಟ್ಟು ಏರಿಯಾ 3400 ಚದುರಡಿ ಆಗಿದ್ದು, ವಾರ್ಡ್ ನಂ.26, ನಾಲ್ಕನೇ ತಿರುವು ರಸ್ತೆ, ಗೋಪಾಳ ಬಡಾವಣೆ ಶಿವಮೊಗ್ಗ ವ್ಯಾಪ್ತಿಯಲ್ಲಿದ್ದು, ಈ ಆಸ್ತಿಯು ಶ್ರೀ ಅರುಣ್ ಜೆ.ಎ ಮತ್ತು ಶ್ರೀಮತಿ ಭಾನುಪ್ರಕಾಶ್ ಇವರ ಹೆಸರಿನಲ್ಲಿದೆ. ಚಕ್ಕುಬಂಧಿ:- ಪೂರ್ವ: ಸೈಟ್ ನಂ.03ರ ಆಸ್ತಿ. ಪಶ್ಚಿಮ: ಖಾಲಿ ಜಾಗ ಮತ್ತು ಹೌಸಿಂಗ್ ಬೋರ್ಡ್ ಕಾಲೋನಿ, ಉತ್ತರ: ಸೈಟ್ ನಂ.9 ಮತ್ತು 10 ಎ ಬ್ಲಾಕ್‌ಗೆ ಸಂಬಂಧಿಸಿದ ಆಸ್ತಿ. ದಕ್ಷಿಣ: 30 ಅಡಿ ರಸ್ತೆ.

ಸ್ಥಳ: ಕಾರವಾರ
ದಿನಾಂಕ: 19-08-2026

ಸಹಿ/-
ಅಧಿಕೃತ ಅಧಿಕಾರಿ
ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿ.,